**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 9 ಫ್ರಾ.ಸಾ. : 7**

ಸಾಕ್ಷಿಯ ಹೆಸರು : ಚಂದನ್
ತಂದೆಯ ಹೆಸರು : ರಮೇಶ ಮಾಂಜ್ರೇಕರ
ವಯಸ್ಸು : 45 ವರ್ಷ
ಉದ್ಯೋಗ : ಎಚ್ ಸಿ 1346 , ಡಿ ಸಿ ಆರ್ ಬಿ ಘಟಕ ಕಾರವಾರ
ವಾಸ : ಕಾರವಾರ

**ದಿನಾಂಕಃ 04-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು 2008 ರಿಂದ ಲೋಕಾಯುಕ್ತ ಕಚೇರಿ ಕಾರವಾರದಲ್ಲಿ ಆರಕ್ಷಕ ಪೇದೆಯಾಗಿ ಮತ್ತು 2014 ರಿಂದ 2021 ರವರೆಗೆ ಆರಕ್ಷಕ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 16.09.2013 ರಂದು ನಾನು ಕಚೇರಿಯಲ್ಲಿದ್ದಾಗ ಈ ಪ್ರಕರಣದ ಫಿರ್ಯಾದಿ ಚಾಸಾ-1 ರವರು ಫಿರ್ಯಾದು ನೀಡಿದ ಮೇರೆಗೆ ತನಿಖಾಧಿಕಾರಿಯಾದ ಆರಕ್ಷಕ ಉಪಾಧೀಕ್ಷಕರು ನೀಡಿದ ಆದೇಶದಂತೆ ನಾನು ಪ್ರಕರಣದಲ್ಲಿ ಫ್ರಾಯೋಗಿಕ ಪಂಚನಾಮೆಯನ್ನು ಲ್ಯಾಪಟಾಪ್ ನಲ್ಲಿ ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಬೆರಳಚ್ಚು ಮಾಡಿದೆ . ನಂತರ ಟ್ರ್ಯಾಪ್ ಕಾರ್ಯಾಚರಣೆ ಕುರಿತು ಕುಮಟಾಕ್ಕೆ ಹೋದಾಗ ಆರೋಪಿಯು ಟ್ರ್ಯಾಪ್ ಕಾರ್ಯಾಚರಣೆ ಸಮಯದಲ್ಲಿ ಫಿರ್ಯಾದಿಯಿಂದ ಲಂಚದ ಹಣವನ್ನು ಪಡೆದಿರುತ್ತಾನೆ. ಆ ಸಮಯದಲ್ಲಿ ನಾನು ಹಾಜರು ಇದ್ದು ಟ್ರ್ಯಾಪ್ ಪಂಚನಾಮೆಯನ್ನು ಬೆರಳಚ್ಚು ಮಾಡಿರುತ್ತೇನೆ. ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಲಂಚ ಪಡೆದ ಆರೋಪಿ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆಗಿರುತ್ತಾನೆ . ಈಗ ನಾನು ಫ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆ ನೋಡಿರುತ್ತೇನೆ. ಅವರೆಡರಲ್ಲಿಯೂ ನನ್ನ ರುಜು ಇದೆ . ಅವುಗಳನ್ನು ಈಗಾಗಲೇ ನಿ.ಪಿ. 1 ಮತ್ತು 2 ಎಂದು ಗುರುತಿಸಲಾಗಿದೆ . ಅವುಗಳಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 1(ಬಿ) ಮತ್ತು 2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ನಾನು ಎರಡೂ ಪಂಚನಾಮೆಗಳನ್ನು ಬೆರಳಚ್ಚು ಮಾಡಿದ ಬಗ್ಗೆ ಕಲಂ 65(ಬಿ) ಪ್ರಮಾಣ ಪತ್ರವನ್ನು ನನ್ನಿಂದ ತನಿಖಾಧಿಕಾರಿ ಪಡೆದಿಲ್ಲ. ಫಿರ್ಯಾದಿಯಿಂದ ಆರೋಪಿ ಹಣ ತೆಗೆದುಕೊಂಡಿದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಟ್ರ್ಯಾಪ್ ಪಂಚನಾಮೆಯನ್ನು ಕುಮಟಾದ ಕಚೇರಿಯಲ್ಲಿ ಬೆರಳಚ್ಚು ಮಾಡಿರುತ್ತೇನೆ ಅದು ಯಾವ ಕಚೇರಿ ಎಂದು ನೆನಪು ಬರುತ್ತಿಲ್ಲ. ಕುಮಟಾದಲ್ಲಿ ಆ ದಿನ ಒಂದೇ ಕಚೇರಿಗೆ ಹೋಗಿದ್ದೆವು . ಅದು ಆರೋಪಿಯ ಕಚೇರಿ ಆಗಿತ್ತು . ಆರೋಪಿಯ ಕಚೇರಿಯಲ್ಲಿ ಟ್ರ್ಯಾಪ್ ಪಂಚನಾಮೆ ಬೆರಳಚ್ಚು ಪ್ರಾರಂಭಿಸಿದೆ. ಅದನ್ನು ಎಲ್ಲಿ ಮುಕ್ತಾಯ ಮಾಡಿದೆ ಎಂದು ನೆನಪಾಗುತ್ತಿಲ್ಲ. ನಾನು ಇಲ್ಲಿಯವರೆಗೆ 50-60 ಪ್ರಕರಣಗಳಲ್ಲಿ ಸಾಕ್ಷಿಯಾಗಿ ನಮೂದು ಆಗಿದ್ದೇನೆ ಎಂದರೆ 18-20 ಪ್ರಕರಣಗಳಲ್ಲಿ ಸಾಕ್ಷಿಯಾಗಿ ನಮೂದು ಆಗಿದ್ದೇನೆ. ನ್ಯಾಯಾಲಯದಲ್ಲಿ 2-3 ಪ್ರಕರಣದಲ್ಲಿ ಮಾತ್ರ ಸಾಕ್ಷ್ಯ ನೀಡಿದ್ದೇನೆ. ಟ್ರ್ಯಾಪ್ ಪಂಚನಾಮೆಯಲ್ಲಿ ಯಾವ ಕಚೇರಿಯಲ್ಲಿ ಅದನ್ನು ಬೆರಳಚ್ಚು ಪ್ರಾರಂಭ ಮಾಡಲಾಯಿತು ಅದನ್ನು ನಮೂದಿಸಿದ್ದೇನೆ. ಆರೋಪಿ ಕಚೇರಿಯಲ್ಲಿ ಪಂಚನಾಮೆ ಬೆರಳಚ್ಚು ಮಾಡಲು ಪ್ರಾರಂಭಿಸಿದಾಗ ಸಂಜೆ ಸುಮಾರು 4.00 ಗಂಟೆಯಾಗಿರಬಹುದು ಸರಿಯಾಗಿ ನೆನಪಿಲ್ಲ. ರಾತ್ರಿ ಸುಮಾರು 8.00 ಗಂಟೆಗೆ ಪಂಚನಾಮೆ ಮುಕ್ತಾಯ ಆಗಿರಬಹುದು . ಠಾಣೆಯಿಂದ ಗುನ್ನಾ ಸ್ಥಳಕ್ಕೆ ನಾವು ಲ್ಯಾಪಟಾಪ್ ಮತ್ತು ಪ್ರಿಂಟರ್ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಯಾವ ಯಾವ ಸ್ಥಳಗಳಿಗೆ ಹೋಗಿದ್ದೇವೆ ಎಂದು ಸದರಿ ಪಂಚನಾಮೆಯಲ್ಲಿ ಬರೆಯಲಾಗಿದೆಯಾ ಎಂದರೆ ಹೌದು . ಯಾವ ಯಾವ ಸ್ಥಳಕ್ಕೆ ಹೋಗಿದ್ದೆವು ಎಂದು ನೆನಪು ಬರುತ್ತಿಲ್ಲ. ನಾನು ಕುಮಟಾಗೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪ್ರಾಯೋಗಿಕ ಮತ್ತು ಟ್ರ್ಯಾಪ್ ಪಂಚನಾಮೆಯನ್ನು ಬೆರಳಚ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಲ್ಯಾಪಟಾಪ್ ನಲ್ಲಿ ಬೆರಳಚ್ಚು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದಿರುವ ಯಾವುದೇ ವಿಚಾರ ನನಗೆ ಗೊತ್ತಿಲ್ಲದೇ ಇರುವುದರಿಂದ ನನಗೆ ಮರೆತು ಹೋಗಿದೆ ಮತ್ತು ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ನನಗೆ ನೆನಪು ಇಲ್ಲದೇ ಇರುವುದರಿಂದ ನೆನಪಿಲ್ಲ

ಎಂದು ಹೇಳಿದ್ದೇನೆ. ಟ್ರ್ಯಾಪ್ ಪಂಚನಾಮೆಯನ್ನು ಕಾರವಾರದ ಲೋಕಾಯುಕ್ತ ಠಾಣೆಯಲ್ಲಿ ಸಿದ್ಧಪಡಿಸಿ ಇಟ್ಟಿದ್ದಕ್ಕೆ ಅಲ್ಲಿ ನಾನು ರುಜು ಮಾಡಿದ್ದೇನೆ ಎಂದರೆ ಸುಳ್ಳು .

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ